# ಪತ್ರಿಕಾ ಪ್ರಕಟಣೆ

## ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆಯ ವತಿಯಿಂದ ಬೆಂಗಳೂರಿನ ಎಸ್.ಪಿ. ರಸ್ತೆ, ಚಿಕ್ಕಪೇಟೆ ಮತ್ತು ಕೇಂದ್ರ ವ್ಯಾಪಾರ ವಲಯದಲ್ಲಿ ಪರೀಕ್ಷಾರ್ಥ ಖರೀದಿ ಅಭಿಯಾನ

ವಾಣಿಜ್ಯ ತೆರಿಗೆಗಳ ಇಲಾಖೆಯ ದಕ್ಷಿಣ ವಲಯದ ಜಾರಿ ವಿಭಾಗದಿಂದ ಕಳೆದೆರಡು ವಾರಗಳಲ್ಲಿ ಪರೀಕ್ಷಾರ್ಥ ಖರೀದಿ ಕಾರ್ಯಾಚರಣೆ ನಡೆಸಿ ಸೂಕ್ತ ಮಾರಾಟ ಬಿಲ್ಲುಗಳನ್ನು ನೀಡದ ವರ್ತಕರಿಂದ ರೂ.1.42 ಕೋಟಿ ತೆರಿಗೆ ಮತ್ತು ದಂಡವನ್ನು ವಸೂಲಿ ಮಾಡಿ, ಮುಂದುವರೆದ ತಪಾಸಣೆಯಿಂದ ರೂ.20.79 ಕೋಟಿ ಬಚ್ಚಿಟ್ಟ ವಹಿವಾಟು ಹಾಗೂ ರೂ.3 ಕೋಟಿ ತೆರಿಗೆ ವಂಚನೆಯನ್ನು ಪತ್ತೆ ಹಚ್ಚಲಾಗಿದೆ. ಇದು ತೆರಿಗೆದಾರರು ಖರೀದಿ ಬಿಲ್ಲುಗಳನ್ನು ನೀಡುವ ಅನುಪಾಲನೆಯನ್ನು ಖಾತ್ರಿಪಡಿಸಿಕೊಳ್ಳುವ ಪ್ರಸ್ತುತ ಪ್ರಯತ್ನಗಳ ಒಂದು ಭಾಗವಾಗಿದೆ.

ವಾಣಿಜ್ಯ ತೆರಿಗೆಗಳ ಇಲಾಖೆಯ ಅಧಿಕಾರಿಗಳು ಖರೀದಿದಾರರ ಸೋಗಿನಲ್ಲಿ ಎಸ್.ಪಿ. ರಸ್ತೆ, ಬಿ.ವಿ.ಕೆ. ಐಯ್ಯಂಗಾರ್ ರಸ್ತೆ, ರಾಜಾ ಮಾರ್ಕೆಟ್ ಹಾಗೂ ಕೇಂದ್ರ ವ್ಯಾಪಾರ ವಲಯದಲ್ಲಿರುವ ಎಲೆಕ್ಟ್ರಾನಿಕ್ ವಸ್ತುಗಳು, ಎಲೆಕ್ಟ್ರಿಕಲ್ ವಸ್ತುಗಳು, ಸಿದ್ಧ ಉಡುಪು ಹಾಗೂ ಚಿನ್ನಾಭರಣ ಮಾರಾಟ ಮಾಡುವ ಅಂಗಡಿಗಳಿಗೆ ಭೇಟಿ ನೀಡಿ 113 ವ್ಯಾಪಾರ ಸ್ಥಳಗಳಲ್ಲಿ ಪರೀಕ್ಷಾರ್ಥ ಖರೀದಿ ನಡೆಸಿ ಮಾರಾಟ ಬಿಲ್ಲುಗಳನ್ನು ನೀಡದಿದ್ದ ವರ್ತಕರಿಗೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ದಂಡ ವಿಧಿಸಿರುತ್ತಾರೆ.

ಪರೀಕ್ಷಾರ್ಥ ಖರೀದಿಯ ನಂತರ ಮಾರಾಟ ಬಿಲ್ಲು ನೀಡದ ವರ್ತಕರ ವ್ಯಾಪಾರ ಸ್ಥಳಗಳನ್ನು ತಪಾಸಣೆಗೊಳಪಡಿಸಿದಾಗ ಸದರಿ ವರ್ತಕರು ತೆರಿಗೆ ವಂಚನೆಯಲ್ಲಿ ತೊಡಗಿರುವುದನ್ನು ಪತ್ತೆ ಹಚ್ಚಲಾಗಿದೆ. ವ್ಯಾಪಾರ ಸ್ಥಳಗಳಲ್ಲಿ ಸೂಕ್ತ ಖರೀದಿ ದಾಖಲೆಗಳಿರದ ಸರಕುಗಳನ್ನು ಹೊಂದಿರುವುದನ್ನು ಗಮನಿಸಲಾಗಿದೆ ಹಾಗೂ ಬೆಳ್ಳಿ ವ್ಯಾಪಾಸ್ಥರಿಗೆ ಸಂಬಂಧಿಸಿದ ಮೂರು ಅನಧಿಕೃತ ಗೋದಾಮುಗಳಲ್ಲಿ ಅಡಗಿಸಿಟ್ಟ ಸುಮಾರು ರೂ.8 ಕೋಟಿ ಮೌಲ್ಯದ ವಸ್ತುಗಳನ್ನು ಪತ್ತೆ ಹಚ್ಚಲಾಗಿದೆ.



ವಾಣಿಜ್ಯ ತೆರಿಗೆಗಳ ಇಲಾಖೆಯು ಮುಂಬರುವ ದಿನಗಳಲ್ಲಿ ನಗರದ ವಿವಿಧ ಭಾಗಗಳಲ್ಲಿ ಈ ರೀತಿಯ ಪರೀಕ್ಷಾರ್ಥ ಖರೀದಿ ಕಾರ್ಯಾಚರಣೆ ನಡೆಸಲಿದ್ದು ಮಾರಾಟಕ್ಕೆ ಸೂಕ್ತ ಬಿಲ್ಲುಗಳನ್ನು ನೀಡದ ವರ್ತಕರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಿದೆ. ಮುಂದುವರೆದು ಎಲ್ಲಾ ಗ್ರಾಹಕರು ವಸ್ತುಗಳ ಖರೀದಿಗೆ ಸೂಕ್ತ ಬಿಲ್ಲನ್ನು ನೀಡುವಂತೆ ಒತ್ತಾಯಿಸಲು ಈ ಮೂಲಕ ಸೂಚಿಸಿದೆ. ಯಾವುದಾದರೂ ವರ್ತಕರು ಬಿಲ್ಲುಗಳನ್ನು ನೀಡಲು ನಿರಾಕರಿಸಿದಲ್ಲಿ ಸ್ಥಿರ ದೂರವಾಣಿ ಸಂಖ್ಯೆ.080–25706210 ಮಾಹಿತಿ ನೀಡುವಂತೆ ಕೋರಲಾಗಿದೆ.

(ಎಂ.ಎಸ್. ಶ್ರೀಕರ್)

ವಾಣಿಜ್ಯ ತೆರಿಗೆಗಳ ಆಯುಕ್ತರು

(ಕರ್ನಾಟಕ), ಬೆಂಗಳೂರು